SRI DEVARAJ URS ACADEMY OF HIGHER EDUCATION & RESEARCH

SRI DEVARAJ URS MEDICAL COLLEGE

Tamaka, Kolar

SDUAHER

**UINIVERSITY LIBRARY & LEARNING RESOURCE CENTRE**

Online Newspaper Clipping Service

**Dated, Sunday 5th February – 2017**

ಉದಯವಾಣಿ

**Pg.No.01**

# ಏಕ ಪರೀಕ್ಷೆಗೆ ಸುಪ್ರೀಂ ಪ್ರಶ್ನೆ

**ನವದೆಹಲಿ:** ಮೆಡಿಕಲ್, ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆಗೆ ಒಂದೇ ಪ್ರವೇಶ ಪರೀಕ್ಷೆ ಸಾಕು ಎಂಬ ಕೇಂದ್ರದ ನಿರ್ಧಾರವನ್ನು ಸುಪ್ರೀಂಕೋರ್ಟ್ ಪ್ರಶ್ನಿಸಿದೆ.ಇದರಿಂದ ವಿದ್ಯಾರ್ಥಿಗಳಿಗೆ ಒತ್ತಡ ಉಂಟಾಗುವುದಿಲ್ಲವೇ ಎಂದು ನ್ಯಾ.ಎ.ಕೆ.ಗೋಯಲ್ ಮತ್ತು ನ್ಯಾ.ಯು.ಯು.ಲಲಿತ್ ಅವರನ್ನೊಳಗೊಂಡ ಪೀಠ ಸರ್ಕಾರವನ್ನು ಕೇಳಿದೆ. ಇದರ ಜತೆಗೆ ಏಕೀಕೃತ ಪ್ರವೇಶ ಪರೀಕ್ಷೆ ಎಂಬ ಪ್ರಸ್ತಾವದ ಬದಲಿ ವ್ಯವಸ್ಥೆ ಬಗ್ಗೆ ಪರಿಶೀಲನೆ ನಡೆಸಿ ಎಂದು ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ವೇಳೆ ಕೇಂದ್ರಕ್ಕೆ ಸಲಹೆ ಮಾಡಿದೆ. ಈಗ ಚಾಲ್ತಿಯಲ್ಲಿರುವ ನಿಯಮ ವಿದ್ಯಾರ್ಥಿಗಳ ಭವಿಷ್ಯಕ್ಕೆ ಮಾರಕವಾಗಿದೆ ಎಂದಿದೆ.

▶ ವಿವರ: 9

## ಕೋರ್ಟ್ ಕಾಳಜಿ

# ಒಂದೇ ಪರೀಕ್ಷೆಯ ಅಗತ್ಯವೇನು?

- ಕೇಂದ್ರಕ್ಕೆ ಸುಪ್ರೀಂಕೋರ್ಟ್‌ಗೆ ಪ್ರಶ್ನೆ
- ಪ್ರವೇಶ ಪರೀಕ್ಷೆ, ಪ.ಪೂ ಪರೀಕ್ಷೆ ಅಂಕಗಳನ್ನೇಕೆ ಪರಿಗಣಿಸಬಾರದು?

**ನವದೆಹಲಿ:** ಮೆಡಿಕಲ್, ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆಗೆ ಒಂದೇ ಪ್ರವೇಶ ಪರೀಕ್ಷೆ ಸಾಕು ಎಂಬ ಕೇಂದ್ರದ ನಿರ್ಧಾರವನ್ನು ಸುಪ್ರೀಂಕೋರ್ಟ್ ಪ್ರಶ್ನಿಸಿದೆ. ಇದರಿಂದ ವಿದ್ಯಾರ್ಥಿಗಳಿಗೆ ಒತ್ತಡ ಉಂಟಾಗುವುದಿಲ್ಲವೇ ಎಂದು ನ್ಯಾ.ಎ.ಕೆ.ಗೋಯಲ್ ಮತ್ತು ನ್ಯಾ.ಯು.ಯು. ಲಲಿತ್ ಅವರನ್ನೊಳಗೊಂಡ ಪೀಠ ಸರ್ಕಾರವನ್ನು ಕೇಳಿದೆ. ಇದರ ಜತೆಗೆ ಏಕೀಕೃತ ಪ್ರವೇಶ ಪರೀಕ್ಷೆ ಎಂಬ ಪ್ರಸ್ತಾಪದ ಬದಲಿ ವ್ಯವಸ್ಥೆ ಬಗ್ಗೆ ಪರಿಶೀಲನೆ ನಡೆಸಿ ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ವೇಳೆ ಕೇಂದ್ರಕ್ಕೆ ಸಲಹೆ ನೀಡಿದೆ.

ಈಗ ಚಾಲ್ತಿಯಲ್ಲಿರುವ ನಿಯಮ ವಿದ್ಯಾರ್ಥಿಗಳ ಭವಿಷ್ಯಕ್ಕೆ ಮಾರಕವಾಗಿದೆ. ಪ್ರವೇಶಕ್ಕೆ ಬೇಕಾಗುವ ಮಾನದಂಡವನ್ನು ಅಳೆಯಲು ಪದವಿ ಪೂರ್ವ ಪರೀಕ್ಷೆಯಲ್ಲಿ ಶೇ.40 ಮತ್ತು ಆಯಾ ಕೋರ್ಸ್‌ಗಳ ಪ್ರವೇಶ ಪರೀಕ್ಷೆಯಲ್ಲಿ ಶೇ.60 ಅಂಕಗಳನ್ನು ಪರಿಗಣಿಸಿ ಅಂಥ ಕೋರ್ಸ್‌ಗಳಿಗೆ ಪ್ರವೇಶ ನೀಡಬೇಕು ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿತು. ಕೇವಲ ಪ್ರವೇಶ ಪರೀಕ್ಷೆಯಿಂದಲೇ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿ ಮೆಡಿಕಲ್, ಎಂಜಿನಿಯರಿಂಗ್ ಕೋರ್ಸ್‌ಗೆ ಅರ್ಹರು ಎಂದು ತೀರ್ಮಾನಿಸುವ ಕ್ರಮ ಸರಿಯಾದುದಲ್ಲ. ಹೀಗೆಂದು ಆ ರೀತಿ ಆದೇಶ ನೀಡಲೂ ಸಾಧ್ಯವಿಲ್ಲ ಎಂದಿತು ನ್ಯಾಯಪೀಠ.

ಪ್ರವೇಶ ಪರೀಕ್ಷೆಗೆ ತರಬೇತಿ ಎಂದು ಕೋಚಿಂಗ್ ಕ್ಲಾಸ್ ನೀಡುವ ಸಂಸ್ಥೆಗಳು ವ್ಯಾಪಕವಾಗಿವೆ. ಅವುಗಳನ್ನು ನಿಯಂತ್ರಿಸಲು ಸಾಧ್ಯವಿಲ್ಲವೇ ಎಂದು ಕೋರ್ಟ್ ಕೇಂದ್ರವನ್ನು ಪ್ರಶ್ನೆ ಮಾಡಿತು. ಹಾಗೆಂದು ಅವುಗಳನ್ನು ಸಂಪೂರ್ಣವಾಗಿ ನಿಯಂತ್ರಿಸಬೇಕೆಂದೂ ಅಲ್ಲ ಎಂದೂ ಸ್ಪಷ್ಟನೆ ನೀಡಿತು.

ಕನ್ನಡಪ್ರಭ



# 3 ಅವಕಾಶದೊಳಗೆ ನೀಟ್ ಬರೆಯಿರಿ

**ನವದೆಹಲಿ:** ನೀಟ್ (ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ) ಬರೆಯುವವರಿಗೆ ಸಂತಸದ ಸುದ್ದಿ. ಈ ಹಿಂದೆ ಮೂರು ಪ್ರಯತ್ನಗಳಲ್ಲಿ ಪರೀಕ್ಷೆ ಬರೆದು ವಿಫಲರಾಗಿ ಇನ್ನು ತಮಗೆ ಅವಕಾಶವಿಲ್ಲ ಎಂದು ನಿರಾಶೆ ಪಡಬೇಕಿಲ್ಲ. ಏಕೆಂದರೆ ಈ ವರ್ಷ ನಡೆಯುವ 'ನೀಟ್'ಅನ್ನು 'ಮೊದಲ ಯತ್ನ' ಎಂದು ಪರಿಗಣಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ನೀಟ್ ತೇರ್ಗಡೆಯಾಗಲು 3 ಅವಕಾಶಗಳನ್ನು ನೀಡಲು ಸರ್ಕಾರ ನಿರ್ಧರಿಸಿದ್ದು, ಈ ವರ್ಷದ ಪರೀಕ್ಷೆಯನ್ನು ಮೊದಲ ಯತ್ನವೆಂದು ಪರಿಗಣಿಸಲಿದೆ. ನೀಟ್ ಈ ಸಲ ವೈದ್ಯ ಪ್ರವೇಶ ಪರೀಕ್ಷೆಗಳಿಗೆ ಮಾತ್ರ ಅನ್ವಯವಾಗಲಿದೆ. ನೀಟ್ ಅನ್ನು ಕೇಂದ್ರೀಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ಸಿಬಿಎಸ್ಇ) ಹಮ್ಮಿಕೊಳ್ಳುತ್ತದೆ. ಈ ಹಿಂದಿನ 3 ನೀಟ್‌ಗಳಲ್ಲಿ ಅನುತ್ತೀರ್ಣರಾದವರು ಈ ವರ್ಷ ನಡೆಯುವ ನೀಟ್‌ಗೆ ಅರ್ಹರಲ್ಲ ಎಂದು ಸಿಬಿಎಸ್ಇ ಈ ಮುನ್ನ ತಿಳಿಸಿತ್ತು.